ಫಾರೆಸ್ಟ್ ಇಲಾಖಾ.

ಇಸ್ತಿಹಾರ್.

ತಾರೀಖು 26ನೆ ಫೆಬ್ರವರಿ 1907.

ಬೆಂಗಳೂರು ಸಿಟಿ ಲೇಟ್ ದಿವಾ ಕೃಷ್ಣಮನಾಯಿಶರವರ ಕೋಲಾಲಾಡ್ರೆಂಬ ಬಂಗ್ಲೆಯಲ್ಲಿ, ಹಾಲಿ ಇರುವ ಮೈಸೂರು ಸೀನಿಯ ಫಾರೆಸ್ಟ್ಸ್ ಕರ್ಷರ್‌ವೇಟರ್ ಸಾಹೇಬರವರ ಆಫೀಸು ಕಂಪೌಂಡಿನಲ್ಲಿ ಮಾರ್ಚ್ 23ನೆ ತಾರೀಖು ಶನಿವಾರ ಮಧ್ಯಾಹ್ನ 12 ಘಂಟೆಗೆ ಇದರಡಿ ಕಂಡ ಸಾಮಾನುಗಳು ಹರಾಜು ಹಾಕಲ್ಪಡುವವು :-

ಹರಾಜು ಷರತ್ತುಗಳು.

ಚಡ ಸವಾಲ್ದಾರನು ಹರಾಜು ತಾರೀಖು ಲಾಗಾಯಿತು ಮೂರು ದಿವಸಗಳಲ್ಲಿ ಸವಾಲ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಬೇಕು. ಇದಕ್ಕೆ ತಪ್ಪಿದರೆ ಸದರಿ ಮಾಲು ದುಸರ ಹರಾಜು ಮಾಡಲ್ಪಡುತ್ತೆ. ಇದರಿಂದ ಉಂಟಾಗುವ ನಷ್ಟಕ್ಕೆ ಮೊದಲನೆ ಹರಾಜಿನ ಚಡ ಸವಾಲ್ದಾರನು ಬದ್ಧನಾಗಿರುವನು. ಅದರಿಂದ ಏನಾದರೂ ಫಾಯಿದೆ ಉಂಟಾದರೆ ಸದರಿ ಮೊದಲಿನ ಹರಾಜಿನ ಚಡ ಸವಾಲ್ದಾರನಿಗೆ ಯಾವ ಬಾಧ್ಯತೆಯೂ ಇರುವದಿಲ್ಲ.

ಹರಾಜಿನಲ್ಲಿ ಪಡದ ಮಾಲನ್ನು ಹರಾಜು ತಾರೀಖು ಲಾಗಾಯಿತು ಮೂರು ದಿವಸಗಳಲ್ಲಿ ಸಾಗಿಸಿಕೊಂಡುಹೋಗತಕ್ಕದ್ದು.

ಸಾಮಾನುಗಳ ಷೆಡ್ಯೂಲ್.

2	ದೊಡ್ಡ ಡೇರೆಗಳು.	9	ರಾವುಟಗಳು.
1	ಬಿಜೋಬಾ.	1	ಲಾಂದ್ರ.
1	ಸ್ಲೀಪಿಂಗ್ ಪಾಲ್.		

ಎಂ. ಮುತ್ತಣ್ಣ,
ಕರ್ಷರ್‌ವೇಟರ್ ಆಫ್ ಫಾರೆಸ್ಟ್ಸ್.

ತಾರೀಖು 5ನೆ ಮಾರ್ಚ್ 1907ನೆ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—

1. ಇದರಡಿ ನಮೂದಿಸಿರುವ ಕೋಲಾರ ಡಿಸ್ಟ್ರಿಕ್ಟ್ ಮೂಲೂರು ರೇಂಜು ಪ್ಲಾಟೇರ್ಷ್‌ಗಳಲ್ಲಿ ದೊರಿಯಬಹುದಾದ ಕ್ಯಾಸೆರೀನಾ ಸಾದೆಯನ್ನು ಕಡಿದು ಸಾಗಿಸಿಕೊಂಡು ಹೋಗತಕ್ಕ ಹಕ್ಕನ್ನು ಪಡಿಯಲು 1907ನೆ ಇಸವಿ ಮಾರ್ಚ್ 25ನೆ ತಾರೀಖಿನ ಪರಿವಿಗೆ ಕೋಲಾರ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸಿನಲ್ಲಿ ಟೆಂಡರುಗಳು ತೆಗದುಕೊಳ್ಳಲ್ಪಡುವವು.

2. ಸಾದೆ ತೆಗದುಕೊಳ್ಳಲು ಇಷ್ಟವುಳ್ಳವರು ಎಲ್ಲಾ ಅಥವಾ ಯಾವ ಪ್ಲಾಟೇರ್ಷನಲ್ಲಿಸ ಸಾಬೆಗಾಗಲಿ ಟ್ಟು 1ಕ್ಕೆ ದರ ಇಷ್ಟೆಂಬದನ್ನು ಟೆಂಡರಿನಲ್ಲಿ ನಮೂದಿಸಬೇಕು.

3. ಪ್ರತಿ ಬಂದು ಟೆಂಡರಿನ ಜೊತೆ (10) ಹತ್ತು ರೂಪಾಯಿ ಠೇವಣಿ ಬಗ್ಯೆ ಕರೆನ್ಸಿನೋಟು ಮೂಲಕ್ಕೆ ಕಳುಹಿಸಬೇಕು. ಠೇವಣಿ ಮೊಬಲಗು ಇಲ್ಲದೆ ತಲಪುವ ಟೆಂಡರುಗಳು ತಿರಸ್ಕರಿಸಲ್ಪಡುವವು. ಟೆಂಡರುಗಳು ರಿಜಿಸ್ಟರು ಮತ್ತು ಇನ್ಷ್ಯೂರು ಮಾಡಿ ಲಕ್ಕೋಟೆಯ ಮೇಲೆ "ಕ್ಯಾಸರೀನಾ ಸಾದೆ ಟೆಂಡರು" ಎಂದು ಬರೆದು ಕೋಲಾರ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರ ವಿಳಾಸಕ್ಕೆ ರವಾನಿಸಬೇಕು.

4. ಕೋಲಾರ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸಿನಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು 1907ನೆ ಇಸವಿ ಮಾರ್ಚ್ 26ನೆ ತಾರೀಖು ಮಧ್ಯಾಹ್ನ 2 ಘಂಟೆಗೆ ಹಾಜರಿರುವ ದರಖಾಸ್ತುದಾರರ ರೂಬರೂಬ್ ಟೆಂಡರುಗಳನ್ನು ಒಡೆಯುವರು.

5. ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಯಾವ ದರಖಾಸ್ತನ್ನಾಗಲೀ ಅಂಗೀಕರಿಸುವದಕ್ಕೂ ಮತ್ತು ಯಾವ ಕಾರಣವು ನಮೂದಿಸದೆ ತಿರಸ್ಕರಿಸುವದಕ್ಕೂ ಸ್ವತಂತ್ರರಾಗಿರುತ್ತಾರೆ.

6. ಮಂಜೂರ್ಮಾಡಲ್ಪಟ್ಟ ಟೆಂಡರಿನ ಠೇವಣಿ ಮೊಬಲಗು ಉಳಿಸಿಕೊಳ್ಳಲ್ಪಟ್ಟು ಬಾಕಿ ಟೆಂಡರ್‌ದಾರ್‌ಗಳ ಮೊಬಲಗು ರೂಬರೂಬ್ ಪಾವತಿ ಮಾಡಲ್ಪಡುತ್ತೆ. ಟೆಂಡರ್‌ದಾರನು ಹಾಜರಿಲ್ಲವಾದರೆ ಟೆಂಡರುದಾರನ ಖರ್ಚಿನಿಂದ ಮನಿಯಾರ್ಡರ್‌ನು ಮಾಡಲ್ಪಡುತ್ತೆ. ಮಂಜೂರ್ಮಾಡಲ್ಪಟ್ಟ ಟೆಂಡರುದಾರನು ಟೆಂಡರು ಮಂಜೂರಾದ ಒಂದು ವಾರದೊಳಗಾಗಿ ಲೆಕ್ಕಾಚಾರದ ಮೇರೆ ಆಗುವ ಮೊಬಲಗು ಪೈಕಿ ಕೇಕಡಾ 75 ರೂಪಾಯಿಗಳನ್ನು ಕೊಡಬೇಕು. ತರುವಾಯ ಸಾದೆ ಕಡಿಯುವಿಕೆಯಿಂದ ಲಾಟ್ ಕಟ್ಟಲು ಆತನಿಗೆ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಲೈಸೆನ್ಸು ಕೊಡಲ್ಪಡುತ್ತೆ.

7. ಚಡ ಟೆಂಡರುದಾರನು ತಾನು ಪಡೆದ ಸಾದೆ ಒಟ್ಟು ಮೊತ್ತವನ್ನು ತನ್ನ ಸ್ವಂತ ಖರ್ಚಿನಿಂದ 1907ನೆ ಇಸವಿ ಏಪ್ರೆಲ್ 30ನೆ ತಾರೀಖಿಗೆ ಮುಂಚೆಯೇ ಕಡಿಸಿ, ಅದನ್ನು ಕಂಪಾರ್ಟ್‌ಮೆಂಟ್ ಲೈನ್ನಲ್ಲಿ ಲಾಟ್ ಕಟ್ಟಿಸಿ ನಂತರ ಈ ಸಂಗತಿಯನ್ನು ಫಾರೆಸ್ಟ್ ರೇಂಜಾಫಿಸರಿಗೆ ತಿಳಿಯಪಡಿಸಬೇಕು.

8. ಆ ರೀತಿ ಸಾದೆಯಲ್ಲಾ ಲಾಟ್ ಕಟ್ಟಿದ ನಂತರ ರೇಂಜಾಫಿಸರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರ ಚೆಕ್ಕಿಗೆ ಒಳಪಟ್ಟು ಜರೀಬ್‌ಮಾಡಿ ಬಾಕಿ ಇರುವ ಮೊಬಲಗ್ಗೆ ಆರ್ಡ್ಯೆಸು ಕೊಡುತ್ತಾರೆ. ಚಡ ಟೆಂಡರುದಾರನು ಸದರಿ ಮೊಬಲಗನ್ನು ಖಜಾನೆಗೆ ಇರಸಾಲ್ಮಾಡಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ರಹದಾರಿ ಪಡೆದು ಸಾದೆಯನ್ನು ಸಾಗಿಸಬೇಕು. ಸಾದೆ ಜರೀಬಾದ ಲಾಗಾಯಿತು ಅದರ ಪುಟ್ಟ ವಾರಿ ವಗೈರೆ ಚಡ ಟೆಂಡರುದಾರನನ್ನೇ ಹೊಂದಿರುತ್ತೆ.

312

9. ಎಲ್ಲಾ ಜಡ ಟೆಂಡರುದಾರರು ತಾವು ಪಡೆದ ಸಾದೆ ವಿಶಿಷ್ಟವು 1907ನೆ ಇಸವಿ ಮೇ 31ನೆ ತಾರೀಖಿಗೆ ಮುಂಚಿತವಾಗಿಯೇ ಸಾಗಿಸಿಕೊಳ್ಳಬೇಕು. ತಪ್ಪಿದಲ್ಲಿ ಪಿಟೋ ತಾರೀಖಿನ ನಂತರ ಉಳಿಯುವ ಕತರಾವಣಿಯಾದ ಯಾ ಆಗದಿರುವ ಸಾದೆಗೆ ಜಡ ಟೆಂಡರುದಾರನಿಗೆ ಹಕ್ಕಿರುವದಿಲ್ಲ.

ನಂ.	ವ್ಯಾಟೇರ್ಷ ಹೆಸರು.	ಸುಮಾರು ಟನ್.	ಪರಾ.
1	ಕಾಡ ಮುತ್ತನಂದ್ರ	4	1. ಅರವತ್ತೆಂಟು ಸಲೆ ಅಡಿಗೆ ಒಂದು ಟನ್‌ನಂತೆ ಭಾವಿಸತಕ್ಕದ್ದು.
2	ಹೊಸಕುರಂಡಹಳ್ಳಿ	20	
3	ರಾಮಚಂದ್ರಪುರ	2	
4	ಬೆಳ್ಳಾವಿ	5	2. ಇದರಲ್ಲಿ ತೋರಿಸಿರುವ ಮೊತ್ತಕ್ಕಿಂತಲೂ ಜಾಸ್ತಿ ಸಾದೆ ದೊರೆಯಬಹುದು.
5	ಮಲ್ಲಪ್ಪನಹಳ್ಳಿ	15	
6	ಲಕ್ಷ್ಮಿಸಾಗರ	30	
7	ಯಕವಂತಪುರ	5	
8	ಬೈಯಪ್ಪನಹಳ್ಳಿ	10	
9	ವಕ್ಕಲೇರಿ	70	
10	ವಾಲೂರು	80	ತೀವೆ ತಂಗೇಡಿ ಸಾದೆ.
	ಒಟ್ಟು ...	241	

ಎಸ್. ಎ. ಬಾಪೂರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಕೋಲಾರ ಡಿಸ್ಟ್ರಿಕ್ಟ್.

ತುಮಕೂರ ಡಿಸ್ಟ್ರಿಕ್ಟ್

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸಿ ಹಾರ್ ವೆ ಪ್ರಸಿದ್ಧಪತ್ರಿಕೆ.

ತಾರೀಖು ನೆ ಮಾರ್ಚ್ 1907.

ತುಮಕೂರು ತಾಲ್ಲೂಕು ಕೋಳಾಲದ ಹೋಬಳಿ ಕರೇಕಲ್ಲು ಜೋಡಿ ಗ್ರಾಮವು 1907ನೆ ಇಸವಿ 16ನೆ ಏಪ್ರೆಲ್ ತಾರೀಖಿನಲ್ಲಿ ಕರೇಕಲ್ಲು ಗ್ರಾಮದಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ವಿಕ್ರಯಂ ಜಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಗ್ರಾಮವು ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿರುವ ಸಂದರ್ಭದಲ್ಲಿ ತುಮಕೂರು ತಾಲ್ಲೂಕು ಅಮಲ್ದಾರ್ರು ಅವರ ಇಷ್ಟಾನುಸಾರವಾಗಿ ಗ್ರಾಮವನ್ನು ಪೂರ್ತಿಯಾಗಿ ಆಗಲಿ ಅಥವಾ ವೃತ್ತಿಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಆಗಲಿ ಹರಾಜು ಮಾಡಬಹುದು.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಕೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿನಗಳಲ್ಲಿ ಪಾವತೀ ಮಾಡಲ್ಪಡದೇ ಹೋದರೆಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅವರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಮುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ವಿಜಂಟು ಯಾ ಮುತಾಲೀಕರಾಗಿ ಸವಾಲ್ಮಾಡುತ್ತಾರೆಯೇ ಎಂಬ ಅಂಶವನ್ನು ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾರ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಭಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರನು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟು ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯಾಗಲೀ ಯಾ ವಿಸ್ತೀರ್ಣದಲ್ಲಿಯಾಗಲೀ ಇರುವ ಸ್ಖಲಿತ್ಯ (ಲೋಸ) ಗಳಿಗೆ ಸರ್ಕಾರ್ ಮೆಂಟಿನವರು ಜವಾಬ್ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.